†ಶ್ರೀ ಡಿ. ದೇವರಾಜ್ ಅರಸ್.—ರೆವಿನ್ಯೂ ಇಲಾಖೆ ಸಂಗ್ರಹಿಸಿದಂಥ ಅಂಕಿ ಅಂಶಗಳ ಆಧಾರದ ಮೇಲೆ ಈ ಅಂಶವನ್ನು ವ್ಯಕ್ತಪಡಿಸಲಾಗಿದೆ.

ಶ್ರೀ ಬಾಪುಗೌಡ ರಾಯಪ್ಪ.—ಅವರು ವ್ಯಕ್ತಪಡಿಸಿರುವ ಅಂಕಿ ಅಂಶಗಳು ನರಿಯಾಗಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರದು ಏನಾದರೂ ಬೇರೆ ನಂಬ್ಕೆ ಇದ್ದರೆ ಹೇಳಲಿ, ನೋಡೋಣ.

ಶ್ರೀ ಬಾಪುಗೌಡ ರಾಯಪ್ಪ.—ಈ 13 ಲಕ್ಷ ಚಿಲ್ಲರೆ ಎಕರೆಗಳಲ್ಲಿ ಎಷ್ಟು ಲಕ್ಷ ಎಕರೆ ಜಮೀನು ಗಳಲ್ಲಿ ಎಲ್ಲಾವರೆ ಬಾವಿಗಳ ಮೂಲಕ ಹಾಗೂ ಲಿಫ್ಟ್ ಇರಿಗೇಷನ್ ಮೂಲಕ ನಮ್ಮರ್ ಕ್ರಾಪ್ ಬರುವಂತೆ ವ್ಯವಸ್ಥೆಮಾಡಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.—ಸಮ್ಮರ್ ಕ್ರಾಪ್ ವ್ಯವಸ್ಥೆಗೆ ಪ್ರತ್ಯೇಕ ನೋಟೀಸ್ ಬೇಕು.

## Construction of Gubbi Veeranna Theatre

58. Sri GATTI CHANDRASEKHAR (Gubbi).—

Will the Minister for Education be pleased to state :—

whether the construction of a Gubbi Veeranna Theatre in memory of Dr. Gubbi Veeranna, who was like a Pole Star in the Dramatic field of Karnataka is under the consideration of Government ?

Sri V. S. KOUJALGI (Minister of State for Youth Services—[On behalf of Sri A. R. BADARINARAYANA (Minister for Eucation)].—

No.

ಶ್ರೀ ಗಟ್ಟಿ ಚಂದ್ರಶೇಖರ್.—ನನ್ನ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಮಾನ್ಯ ಶ್ರೀ ಗುಬ್ಬಿ ವೀರಣ್ಣನವರ ವಿಷಯ ನನಗಿಂತಲೂ ಸರ್ಕಾರಕ್ಕೆ ಚೆನ್ನಾಗಿಯೇ ಗೊತ್ತಿದೆ. ಅವರು ಇಡೀ ಕರ್ನಾಟಕದ ರಂಗಭೂಮಿಯ ಪಿತಾಮಹರು ಹಾಗೂ ಧ್ರುವತಾರೆಯಂತಿದ್ದವರು. ಡೈಮಂಡ್ ಜೂಬಿಲಿ, ಗೋಲ್ಡನ್ ಜೂಬಿಲಿ ಮತ್ತು ಸಿಲ್ವರ್ ಜೂಬಿಲಿ ಮಹೋತ್ಸವಗಳನ್ನು ಮಾಡಿಸಿಕೊಂಡಂಥ ಮಹಾ ವ್ಯಕ್ತಿ. ಇಡೀ ಹಿಂದೂಸ್ತಾನದಲ್ಲಿ ನಾಟಕರಂಗದಲ್ಲಿ ಪ್ರಜ್ಞಾವಂತ ಯನ್ನು ಗಳಿಸಿದಂತಹವರಲ್ಲಿ ಅವರನ್ನು ಬಿಟ್ಟರೆ ಮತ್ತೆ ಯಾರೂ ಇಲ್ಲ. ಇದು ನಮ್ಮ ರಾಜ್ಯದ ಒಂದು ಹೆಮ್ಮೆ. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ರವೀಂದ್ರ ಕಲಾಕ್ಷೇತ್ರವನ್ನು ಕಟ್ಟಿರುವ ಹಾಗೆ ಗುಬ್ಬಿ ವೀರಣ್ಣ ರಂಗಮಂದಿರ ಒಂದನ್ನು ನಿರ್ಮಾಣಮಾಡಿ, ಅದನ್ನು ಆಗಾಗ್ಗೆ ನಾಟಕವಾಡುವಂತಹವರಿಗೆ ಕೊಟ್ಟು ಆ ಮೂಲಕವಾದರೂ ನಾಟಕ ಕಲೆಗೆ ಸರ್ಕಾರದವರು ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಾರೆಯೇ ?

†ಶ್ರೀ ವಿ. ಎಸ್. ಕೌಜಲಗಿ.—ಅಂತಹ ಸಲಹೆ ಬಂದರೆ ಸರ್ಕಾರದಿಂದ ವಿಚಾರಮಾಡಲಾಗುತ್ತದೆ.

ಶ್ರೀ ಎಂ ಎಸ್. ಕೃಷ್ಣನ್.—ಅದರ ಬಗ್ಗೆ ಸಲಹೆಗಳು ಈಗಲೇ ಬಂದಿವೆ. ಆದ್ದರಿಂದ ಅದನ್ನು ಈಗಲಾದರೂ ವಿಚಾರಮಾಡಿ.

ಶ್ರೀ ಕೊಣಂದೂರು ಲಿಂಗಪ್ಪ.—ಇದಕ್ಕೆ ಯಾರೊಬ್ಬರ ಸಲಹೆ, ಅಭಿಪ್ರಾಯ ಬೇಕಾದುದೇ ನಿಲ್ಲ. ಸ್ವಂತ ವಿವೇಚನೆಯಿಂದ ಸರ್ಕಾರವೇ ಈ ಕೆಲಸ ಮಾಡಬಹುದಾಗಿತ್ತು. ಯಾವಾಗ ರವೀಂದ್ರ ಟಾಗೂರ್ ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ರವೀಂದ್ರ ಕಲಾ ಕ್ಷೇತ್ರವನ್ನು ಕಟ್ಟಿರುವಾಗ, ನಮ್ಮ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ತಮ್ಮ ಸ್ವಂತ ವಿವೇಚನೆಯಿಂದ

ಈಗಾಗಲೇ ಗುಬ್ಬಿ ವೀರಣ್ಣ ರಂಗಮಂದಿರವನ್ನು ಕಟ್ಟಿಸಲು ಸರ್ಕಾರ ಒಂದು ನಿರ್ಧಾರವನ್ನು ಮೊದಲೇ ಕೈಗೊಳ್ಳಬೇಕಾಗಿತ್ತು. ಅವರು ಈ ಕಣರ್ಾಟಕಕ್ಕೇ ಅಲ್ಲ, ಇಡೀ ಭಾರತ ಭೂಮಿಯಲ್ಲಿ ಅದರಲ್ಲಿಯೂ ರಂಗ ಭೂಮಿಯಲ್ಲಿ ಬಹು ಮುಖ್ಯಪಾತ್ರಧಾರರಾಗಿ, ಕರಾ ಚಕ್ರವರ್ತಿಯಾಗಿದ್ದುದರಿಂದ, ಅವರ ಹೆಸರಿನಲ್ಲಿ ಒಂದು ರಂಗಮಂದಿರವನ್ನು ತಕ್ಷಣ ಕಟ್ಟಿಸುವುದಕ್ಕೆ ಯೋಚನೆ ಮಾಡುತ್ತೀರಾ ?

(No Reply)

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಕಾರ್ಪೊರೇಷನ್ನಿನವರು ಗುಬ್ಬಿ ಥಿಯೇಟರ್ ಪೂರ್ತಿಯಾಗಿ ಕಟ್ಟುತ್ತೆವೆಂದು ಹೇಳಿ 8 ವರ್ಷಗಳಾದರೂ ಅದರ ಗುದ್ದಲಿ ಪೂಜೆ ಇನ್ನೂ ಆಗಿಯೇ ಇಲ್ಲ. ಅವನ್ನಾದರೂ ಚೆನ್ನಾಗಿ ಕಟ್ಟಿಸಿಕೊಡಿ.

ಶ್ರೀ ಡಿ. ದೇವರಾಜ್ ಅರಸ್.—ನೀವೂ, ನಾವೂ ಎಲ್ಲರೂ ಸೇರಿ ಒಟ್ಟಿಗೆ ಕೂಡಿಕೊಂಡು ಅದನ್ನೇ ಬೇಕಾದರೆ ತೆಗೆದುಕೊಂಡು ಅವರ ಹೆಸರಿನಲ್ಲಿ ಕಟ್ಟೋಣ. ಅದಕ್ಕಾಗಿ ಹಿಂದೆ ಕರ್ಪೊರೇಷನ್ನಿನವರು ಗಾಂಧೀನಗರದಲ್ಲಿ ಒಂದು ನಿವೇಶನವನ್ನು ಕೊಟ್ಟಿದ್ದರೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.— ಕೊಟ್ಟಿದ್ದರು. ಅದು ಕಳೆದ 7—8 ವರ್ಷಗಳಿಂದ ಕೆಲಸವೇನೂ ಆಗದೆ ಹಾಗೆ ಮುಲಕುತ್ತಾ ನಿಂತಿದೆ.

ಶ್ರೀ ಡಿ. ದೇವರಾಜ ಅರಸ್.—ಅದೇ ನಿವೇಶನವನ್ನು ನಾವು ಅವರಿಂದ ತೆಗೆದುಕೊಂಡು ಆ ವಿಚಾರದಲ್ಲಿ ನೀವೂ ಮತ್ತು ನಾವೂ ಉಭಯತ್ರರೂ ಸೇರಿಕೊಂಡು ಕೆಲಸವನ್ನು ಮುಂದು ವರಿಸೋಣ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ಕಾಲ ಮುಗಿಯಿತು.

## Questions for Answers on the day

## (but not taken up)

### Expenditure Incurred by each Minister and Minister of State

78. Sri H. B. LAKSHMANA (Bharmasagara).—

Will the Chief Minister be pleased to state.—

The average amount of expenditure incurred by each Minister and State Ministers of the State per month towards T.A. and D.A. ?

Sri D. DEVARAJ URS (Chief Minister).—

Details given in the Statement appended.